ತಡೆದುಕೊಳ್ಳುವ ಶಕ್ತಿ ನಮ್ಮ ಶರೀರಕ್ಕೆ ಇಲ್ಲ. ಆದರೂ ಪರಿಸ್ಥಿತಿಯನ್ನು ಎದುರಿಸುವ ಮನೋಬಲ ನಮ್ಮ ಸಂಕಲ್ಪಕ್ಕೆ ಇರುವುದರಿಂದ ನಾವು ನಮ್ಮ ಕೆಲಸವನ್ನು ಪ್ರಾರಂಭಿಸೋಣ. ಎಲ್ಲರೂ ನಾನು ಹೇಳುವುದನ್ನು ಅನುಸರಿಸುತ್ತಾ ನನ್ನನ್ನು ಫಾಲೋ ಮಾಡಿ" ಎಂದವರೇ ಮೆಹತಾ ತಮ್ಮ ಮಾತು ಮುಗಿಸಿದರು.

★★★

ಇದೀಗ ಬಂದ ಸುದ್ದಿ...

ಈಶಾನ್ಯ ಕರಾವಳಿಯಲ್ಲಿ ಸಂಭವಿಸಿದ ತೀವ್ರ ಭೂಕಂಪದಿಂದಾಗಿ ಎದ್ದ ಅತಿ ಎತ್ತರದ ಸುನಾಮಿ ಅಲೆಗಳ ರುದ್ರನರ್ತನದಿಂದ ಆದ ಅನಾಹುತ ಊಹೆಗೂ ನಿಲುಕದ್ದು. ನೂರಕ್ಕೆ ತೊಂಬತ್ತರಷ್ಟು ವಿಮಾನಗಳು, ವಾಹನಗಳು, ದೊಡ್ಡ ದೊಡ್ಡ ಮನೆಗಳು ಬೆಂಕಿಪೊಟ್ಟಣಗಳಂತೆ ಕೊಚ್ಚಿಕೊಂಡು ಹೋಗುತ್ತಿರುವುದು ಮನ ಕಲಕುವಂತಿದೆ. ಭೂಕಂಪ ಜಪಾನಿನ ಅಣುಶಕ್ತಿಯನ್ನೇ ಉಡುಗಿಸಿದೆ. ಸ್ಥಾವರದ ಸುತ್ತಮುತ್ತಲಿನ ಲಕ್ಷಾಂತರ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ನಿಸರ್ಗ ವಿಕೋಪಕ್ಕೆ ಸಾವಿರಾರು ಜನ ಅಸುನೀಗಿದ್ದಾರೆ. ಕಾರು, ವಿಮಾನಗಳು ನೀರಿನಲ್ಲಿ ತೇಲುವ ಚಿತ್ರಗಳನ್ನು ನೀವು ಟೀವಿ ದೃಶ್ಯಗಳಲ್ಲಿ ನೋಡಿದ್ದೀರಿ. 'ರಿಕುಜೆನ್ವಕಟಾ' ನಗರ ಒಂದರಲ್ಲಿಯೇ ನಾಲ್ಕು ಸಾವಿರದಷ್ಟು ಮನೆಗಳು ಸಂಪೂರ್ಣ ನೆಲಕಚ್ಚಿವೆ. ನಾಲ್ಕು ರೈಲುಗಳ ಪತ್ತೆಯಿಲ್ಲ. ಟೋಕಿಯೊದಲ್ಲಿ ಜನಜೀವನ ಸ್ತಬ್ಧವಾಗಿದೆ. ರೈಲುಗಳನ್ನು ರದ್ದುಗೊಳಿಸಿರುವುದರಿಂದ ಎರಡು ಲಕ್ಷದಷ್ಟು ಜನರು ಕಚೇರಿಗಳಲ್ಲಿಯೇ ಉಳಿದುಬಿಟ್ಟಿದ್ದಾರೆ. ಕುಡಿಯುವ ನೀರಿಗಾಗಿ ಲಕ್ಷಾಂತರ ಜನರು ಹಾಹಾಕಾರ ಮಾಡುತ್ತಿದ್ದಾರೆ.

ಸುನಾಮಿಯ ದೈತ್ಯ ತೆರೆಗಳು ಪರಮಾಣು ಹಾಗೂ ಅನಿಲ ಸ್ಥಾವರಗಳ ಮೇಲೆ ಅನಿರೀಕ್ಷಿತ ಪ್ರಹಾರ ನಡೆಸಿವೆ. ಆರು ಸ್ಥಾವರಗಳಲ್ಲಿ ಒಂದಕ್ಕೆ ತೀವ್ರ ಹಾನಿಗೆ ಒಳಗಾಗಿದೆ. ಸ್ಥಾವರದ ಕೇಂದ್ರ ಭಾಗದಲ್ಲಿ ಭೀಕರ ಸ್ಫೋಟಗಳು ನಡೆದು ಮೇಲ್‌ಕವಚ ಬಿರಿದು ವಿಕಿರಣ ಸೋರಿಕೆಯಾಗುತ್ತಿದೆ ಎಂದು ತಜ್ಞರು ಹೇಳುತ್ತಿದ್ದಾರೆ.

ಪ್ರಧಾನಿ ನಾವೊಟೆಕನ್ ಪರಿಹಾರ ಕಾರ್ಯಗಳ ಉಸ್ತುವಾರಿ ವಹಿಸಿದ್ದಾರೆ. ಸೇನೆಯ ಮೂಲಕ ಕುಡಿಯುವ ನೀರು, ಆಹಾರ ಪದಾರ್ಥಗಳನ್ನು ಜನರಿಗೆ ತಲುಪಿಸುತ್ತಿದ್ದಾರೆ. ಫುಕುಶಿಮಾ ಅಣು ಸ್ಥಾವರವನ್ನು ಅಪಾಯದಿಂದ ರಕ್ಷಿಸಲು ಭಾರತೀಯ ವಿಜ್ಞಾನಿಗಳ ತಂಡ ಹಗಲುರಾತ್ರಿ ಎನ್ನದೆ ಶ್ರಮಿಸುತ್ತಿದೆ. ಡಾಕ್ಟರ್ ಮೆಹತಾ, ತಂಡದ ನಾಯಕತ್ವವನ್ನು ವಹಿಸಿಕೊಂಡಿದ್ದಾರೆ.

ಇಲ್ಲಿಗೆ ವಾರ್ತಾಪ್ರಸಾರ ಮುಕ್ತಾಯ.

★★★

"ಜಿತೇಂದ್ರ, ಅಂತೂ ಕಡೆಗೆ ಫುಕುಶಿಮಾದ ಅಣು ಸ್ಥಾವರದಿಂದ ಎದುರಾಗಿದ್ದ ಅಪಾಯದಿಂದ ಜಪಾನಿನ ಪ್ರಜೆಗಳನ್ನು ಕಾಪಾಡಿದ್ದಾಯಿತು. ಡಾ. ಮೆಹತಾ ಹೇಳಿದಂತೆ ಮನೋಸಂಕಲ್ಪದ ಮುಂದೆ ಮತ್ತೊಂದು ಇಲ್ಲ. ಎಲ್ಲರೂ ಪಟ್ಟುಹಿಡಿದು ಹೋರಾಡಿ ಜಯಗಳಿಸಿದೆವು. ವಿಕಿರಣಕ್ಕೆ ತುತ್ತಾದ ಐವರಲ್ಲಿ ನಾವಿಬ್ಬರು ಬದುಕುಳಿದು ಆಸ್ಪತ್ರೆ ಪಾಲಾಗಿದ್ದೇವೆ" ಎಂದು ನಗುತ್ತಾ ಹೇಳಿದಳು ಶ್ಯಾಮಲಾ. ಅವಳ ಧ್ವನಿ ನಿತ್ರಾಣಗೊಂಡಿತ್ತು.

"ಐದು ಲಕ್ಷ ಮಿಲ್ಲಿರೆಮ್ಸ್ ರೇಡಿಯೇಷನ್ ಪ್ರಭಾವಕ್ಕೆ ಒಳಗಾದ ನಾವು ಆಸ್ಪತ್ರೆ ಪಾಲಾಗದೆ ಇನ್ನೆಲ್ಲಿರೋದಿಕ್ಕೆ ಸಾಧ್ಯ! ನಿಮಗೊಂದು ವಿಷಯ ಗೊತ್ತೇ?"

"ಏನು..."

"ಮೂರು ತಿಂಗಳ ಮೊದಲೇ ನಮ್ಮ ಗಡಿಯಾರ ನಿಂತುಹೋಗಿದೆ. ಗಮನಿಸಿದ್ದೀರಾ?